“ಅರೇ ಏನ್ಮಾಡ್ತಾರಂತೆ ಅವ್ರು ನನಗೆ? ಯಾವ ಕಾಲ್ದಲ್ಲಿ ಇದ್ದಾರಂತೆ ಅವರು. ನಾನು ವಾಲ್ಮೀಕಿಯೂ ಅಲ್ಲ, ಅವಳು ಸೀತೆಯೂ ಅಲ್ಲ” ಸದಾನಂದನಿಗೆ ರೇಗಿ ಹೋಯಿತು.

“ನಿಮ್ಮ ವಸ್ತ್ರ ಮುಳ್ಳಿಗೆ ಸಿಕ್ಕದೆ. ಉಪಾಯದಿಂದ ಬಿಡಿಸ್ಕಳಬೇಕು.”

“ತಪ್ಪದಂಡ ಇಡ್ಬೇಕಾ?”

“ನೀವು ಊರು ಬಿಟ್ಟು ತೊಡೆ ದಿವ್ಸ ಹೊರ್ಗೆಲ್ಲಾರು ಊಳಿಯೋದು ಚಲೋದು. ಪ್ಯಾಟೆ ತಣ್ಣಾಗ್ದಮೇಲೆ ವಾಪಸ್ ಬಂದ್ರಾಯ್ತು.”

ಬೆರಳು ಸುಡುತ್ತಿದ್ದ ಗ್ಲಾಸ್ ಚಹಾ ಕುಡಿದು ಹೊರಬಿದ್ದರು.

★★★

ಪುಟ್ಟತ್ತೆಯ ಆರೋಗ್ಯ ಹದಗೆಟ್ಟು ಮಂಚಿಕೇರಿಯ ಆಸ್ಪತ್ರೆಗೆ ಸೇರಿಸಿದರು. ಅವಳ ಅನುಪಾನಕ್ಕೆ ದೇವಕಿ ಜತೆಗಿದ್ದಳು. ಹರಿಗದ್ದೆ ಮತ್ತು ಮಂಚಿಕೇರಿ ಪೇಟೆಯ ನಡುವೆ ಹರಿದಾಡಿದ ಕಥಾಪ್ರಸಂಗಕ್ಕೆ ಸಂಪದಳನ್ನು ಮಾಟ ಮಾಡಿ ಮಾಯವಾಗಿಸಿದ್ದಾರಂತೆ ಎಂಬ ರೋಚಕ ಉಪಕಥೆ ಸೇರಿತು. ವಾರದ ಹಿಂದೆ ಹರಿಗದ್ದೆಗೆ ಶೃಂಗೇರಿಯ ಸುಡುಗಾಡು ಸಿದ್ಧ ಬಂದು ರಾತ್ರಿ ವಸತಿ ಅಲ್ಲೇ ಮಾಡಿದ್ದನಂತೆ; ಸಿದ್ಧನ ಕೇಸರಿ ನಿಲುವಂಗಿಯ, ಕಂಬಳಿ ಹೆಗಲಿಗೇರಿಸಿದ ವೇಷ ಪುಟ್ಟತ್ತೆಯ ಕಣ್ಮುಂದೆ ಬಂತು. ಜಗಲಿಯ ಮೇಲೆ ಜಾದೂ ಮಾಡಿ ಬೆರಗುಂಟು ಮಾಡುತ್ತಿದ್ದದ್ದು ನೆನಪಾಯಿತು. ನೋಡುತ್ತಿದ್ದವರ ಕೈಗೆ ಅರಿವೆಯ ಚೆಂಡನ್ನು ಕೊಟ್ಟು ಅಷ್ಟು ದೂರದಲ್ಲಿ ಖಾಲಿ ಗೆರಟೆಯನ್ನು ಬೋರಲಿಟ್ಟು ಮಂತ್ರ ಹೇಳಿದೊಡನೆಯೆ ಗೆರೆಟಯೊಳಗೆ ಚೆಂಡು ಕೂತಿರುತ್ತಿತ್ತು. ಆವೋ ಜಲ್ದಿ ಎನ್ನುತ್ತ ಮುಷ್ಟಿಯಿಂದ ಗುಬ್ಬಿಯೊಂದನ್ನು ಹೊರ ತೆಗೆಯುತ್ತಿದ್ದ. ಸಿದ್ಧ ತನ್ನ ಮಾಂತ್ರಿಕ ವಿದ್ಯೆಯಿಂದ ಹೆಂಗಸರನ್ನು ಬೆಕ್ಕು, ಹಕ್ಕಿಯನ್ನಾಗಿಸುವ ಇಂದ್ರಜಾಲ ಕಲಿತಿದ್ದಾನೆಂದು ಜನ ಭಯಭಕ್ತಿಯಿಂದ ಆಡಿಕೊಳ್ಳುತ್ತಿದ್ದರು. ಮನೆಯಿಂದ ಹೊರಬರಲು ಹೆದರುತ್ತಿದ್ದರು. ಬಾಬಣ್ಣ ಸದಾನಂದನಿಗೆ ಶಾಮೀಲಾಗಿ ಸಿದ್ಧನಿಂದ ಸಂಪದಳನ್ನು ಗಿಳಿಯಾಗಿಸಿದ್ದಾನೆಂದಲೂ ಗಿಳಿಯನ್ನು ಪುನಃ ಸಂಪದಳನ್ನಾಗಿಸಿ ಮದುವೆಯಾಗುತ್ತಾನೆಂದೂ ವದಂತಿ ಹಬ್ಬಿತು. ಶನಿಕಥೆಯಲ್ಲಿ ರಾಜಾತ್ರಿವಿಕ್ರಮನ ಕೊರಳ ಚಿನ್ನದ ಸರವನ್ನು ತೂಗು ಹಾಕಿದ್ದ ಗಿಳಿಗುಟ್ಟವೇ ನುಂಗಿದ್ದನ್ನು ನಂಬಿದ ಪುಟ್ಟತ್ತೆಗೆ ಇದು ಅಸಂಭವ ಎಂದೇನೂ ಅನಿಸಲಿಲ್ಲ. ಸದಾನಂದ ಪಂಚರಂಗಿ ಗಿಳಿಯನ್ನು ತುಂಬಿದ ಪಂಜರದ ಸಮೇತ ಬಸ್ ಏರಿದ್ದನ್ನು ತಾನು ನೋಡಿರುವುದಾಗಿ ದೇವಕಿ ಹೇಳಿದ್ದಳು. ಆಸ್ಪತ್ರೆಗೆ ಬಂದವರನ್ನೆಲ್ಲ ಹರಿಗದ್ದೆಯ ಬಗ್ಗೆ ಪುಟ್ಟತ್ತೆ ವಿಚಾರಿಸುವಳು. ಮಾತಾಡಲು ಅಲ್ಲಿ ಯಾರಿಗೂ ಪುರಸೊತ್ತಿರಲಿಲ್ಲ. ಹೀಗೆ ಕಳವಳಿಸುತ್ತಿದ್ದಾಗ ಅವಳ ತಮ್ಮ ಲಗ್ನಪತ್ರಿಕೆ ಕೊಡಲು ಆಸ್ಪತ್ರೆಗೆ ಬಂದ. ಹರಿಗದ್ದೆಗೆ ಹೋಗಿ ಬಂದದ್ದಾಗಿಯೂ ಮನೆಗೆ ಬೀಗ ಹಾಕಿದ್ದಾರೆಂದೂ ತನಗೆ ಖೇದವಾಯಿತೆಂದೂ ಹೇಳಿದ. “ಅಕ್ಕ, ಎಂತಾ ಜಾಗದಲ್ಲಿ ಕರೆಯುವ ಹಾಂಗಾತು ನೋಡು” ಎಂದ. ದೇವಕಿಯ ಮನೆಗೆ ಹೋದ ನಂತರ ನನ್ನ ಮನೆಗೆ ಹೋಗುತ್ತೇನೆ ಕಳುಹಿಸಿ ಕೊಡು ಎಂದು ಹೇಳುವ ತನ್ನದೆಂಬ ಸ್ವಂತ ಸ್ವತಂತ್ರ ಅವಕಾಶ ಈ ಜನ್ಮದಿಂದಲೇ ಕಳೆದು ಹೋಯಿತು; ಈಗ ಎದುರಿಗಿದ್ದ ಒಡ ಹುಟ್ಟಿದ ತಮ್ಮನಿಗೆ ಮನೆಗೆ ಬಾ ಎಂದು ಕರೆಯುವ ಸ್ಥಿತಿಯಲ್ಲೂ ತಾನಿಲ್ಲ ಎಂದನಿಸಿ ಪುಟ್ಟತ್ತೆಯ ಕಣ್ಣುಗಳು ಹನಿಗೂಡಿದವು.

ತವರಿಂದ ತಮ್ಮ ಬಂದು ಹೋದ ನಂತರ ಪುಟ್ಟತ್ತೆಯ ವರ್ತನೆಯಲ್ಲಿ ಅಸಹಜತೆ ಕಾಣಿಸತೊಡಗಿತು. ನಿದ್ದೆಯಲ್ಲಿ ಹಲುಬುತ್ತಿದ್ದಳು; ಎಚ್ಚರವಿದ್ದಾಗಲೂ ತನ್ನಷ್ಟಕೆ ಮಾತಾಡುವುದು ನಡುವೆ ಬಿಕ್ಕಂತ ನಕ್ಕು ಅಂಗೈಲ್ಲಿ ಬಾಯಿ ಮುಚ್ಚುವುದೂ ಮಾಡುತ್ತಿದ್ದಳು.